ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆ: 5048/2022

ಪ್ರಾ ಸಾ 27 ಚಾ ಸಾ 48

ಹೆಸರು: ಅಪ್ಪು

ತಂದೆಯ ಹೆಸರು: ರಾಜು

ವಯಸ್ಸು: 28 ವರ್ಷ

ಉದ್ಯೋಗ: ಮೀನು ಹಿಡಿಯುವುದು ಮತ್ತು ಈಜುಗಾರ .

ವಾಸ: ಕೆ ಆರ್ ಎಸ್

ದಿ: 21.11.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-

1. ಗಂಗಾರಾಮುರವರ ಹೆಂಡತಿ ಲಕ್ಷ್ಮಿ ಕೆ ಆರ್ ಸಾಗರದ ನಿವಾಸಿ . ಆಕೆಯನ್ನು ಕೊಲೆ ಮಾಡಲಾಗಿದೆ .

2. ಸುಮಾರು 2-3 ವರುಷದ ಹಿಂದೆ ಕೆ ಆರ್ ಸಾಗರ ಪೊಲೀಸರು ನಮ್ಮನ್ನು ಠಾಣೆಗೆ ಕರೆಯಿಸಿದ್ದರು . ಆ ರೀತಿ ನಾನು ಹೋದಾಗ ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ಇದ್ದರು .

3. ಸದರಿ ಲಕ್ಷ್ಮಿಯು ಗಂಗಾರಾಮುವಿನ ಹೆಂಡತಿ ಲಕ್ಷ್ಮಿ ಮತ್ತು 4 ಜನ ಮಕ್ಕಳನ್ನು ಕೊಲೆ ಮಾಡಿದ್ದಾಳೆ ಎಂದು ಆಕೆಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು.

4. ಸದರಿ ಲಕ್ಷ್ಮಿಯು ಪೊಲೀಸರ ಮುಂದೆ ಹೇಳಿಕೆಯನ್ನು ಕೊಡುವಾಗ ತಾನು ಲಕ್ಷ್ಮಿ ಮತ್ತು 4 ಜನ ಮಕ್ಕಳನ್ನು ಕೊಲೆ ಮಾಡುವ ಸಂದರ್ಭದಲ್ಲಿ ಧರಿಸಿದ್ದ ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಬೆಳವತ್ತದಲ್ಲಿ ಇರುವ ಕಾಲುವೆಗೆ ಎಸೆದಿದ್ದೇನೆ. ನನ್ನ ಜೊತೆಯಲ್ಲಿ ಬಂದರೆ ಆ ಕಾಲುವೆಯನ್ನು ತೋರಿಸುತ್ತೇನೆ ಎಂದು ತಿಳಿಸಿದ ಮೇರೆಗೆ ಪೊಲೀಸರು, ಆರೋಪಿ ಲಕ್ಷ್ಮಿ ಮತ್ತು ನಾವು ಪೊಲೀಸರ ವಾಹನದಲ್ಲಿ ಬೆಳವತ್ತದ ಕಾಲುವೆಯ ಬಳಿ ಹೋದಾಗ ಆರೋಪಿ ಲಕ್ಷ್ಮಿಯು ಸೇತುವೆ ಮೇಲೆ ನಿಂತುಕೊಂಡು ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಎಸೆದ ಕಾಲುವೆಯ ಜಾಗವನ್ನು ತೋರಿಸಿಕೊಟ್ಟಳು .

5. ಆ ರೀತಿ ನಾವು ನೋಡಿದಾಗ ಆ ಕಾಲುವೆಯಲ್ಲಿ ಸುಮಾರು ಒಂದೂವರೆ ಅಡಿಯಷ್ಟು ಆಳದ ನೀರು ಹರಿಯುತ್ತಿತ್ತು. ನಾನು ಸುಮಾರು ಬಟ್ಟೆಗಳನ್ನು ಎತ್ತಿ ತೋರಿಸಿದೆ . ಅವುಗಳ ಪೈಕಿ ಆರೋಪಿಯು ಒಂದು ಸ್ಯಾರಿ , ಒಂದು ಲಂಗ , ಒಂದು ವೇಲ್ , ಒಂದು ರವಿಕೆಯನ್ನು ತನ್ನದ್ದು ಎಂದು ಗುರುತಿಸಿದಳು. ಆನಂತರ ಅಲ್ಲೇ ಪಕ್ಕದಲ್ಲಿ ಇದ್ದ ಒಂದು ಸುತ್ತಿಗೆಯನ್ನು ನಾನು ತೆಗೆದು

ತೋರಿಸಿದಾಗ ಅದನ್ನು ಕೂಡ ಆಕೆ ಗುರುತಿಸಿದಳು .

6. ಸದರಿ ನಾಲ್ಕು ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಆರೋಪಿ ಗುರುತಿಸಿದ ಕಾರಣಕ್ಕಾಗಿ ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದಾರೆ .

7. ಸದರಿ ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ನೋಡಿದರೆ ಗುರುತಿಸುತ್ತೇನೆ.

8. ಆ ಸಂದರ್ಭದಲ್ಲಿ ಪೊಲೀಸರು ನಿಪಿ 18 ರಂತೆ 10 ಪೊಟೋಗಳನ್ನು ತೆಗೆದಿರುತ್ತಾರೆ . ಸದರಿ ಪೊಟೋಗಳ ಪೈಕಿ 3 ನೇ ಪೊಟೋದಲ್ಲಿ ನೀರಿನಲ್ಲಿ ವಸ್ತುಗಳನ್ನು ಹುಡುಕುತ್ತಿರುವ ವ್ಯಕ್ತಿ ನಾನು . ಅದೇ ರೀತಿ ನಾಲ್ಕನೇ ಪೊಟೋದಲ್ಲಿ ಒಂದು ಕೈಯಲ್ಲಿ ಬಟ್ಟೆ ಮತ್ತು ಸುತ್ತಿಗೆಯನ್ನು ಹಿಡಿದಿರುವ ಮತ್ತು ಉಳಿದ ಪೊಟೋಗಳನ್ನು ಬಟ್ಟೆಗಳನ್ನು ತೆಗೆದು ತೋರಿಸುತ್ತಿರುವ ವ್ಯಕ್ತಿ ನಾನು.

9. ಸದರಿ ಸುತ್ತಿಗೆ ನ್ಯಾಯಾಲಯದ ಮುಂದಿರುವ ಮು.ಮಾ 19 ಆಗಿದೆ . ಬಟ್ಟೆಗಳು ಮು.ಮಾ 20 ರಿಂದ 23 ಆಗಿವೆ .

ಪಾಟೀ ಸವಾಲುಃ ಮುಂದೂಡಿದೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

<u>ಸಾಕ್ಷಿಯನ್ನು ಮತ್ತೇ ದಿನಾಂಕಃ **23.04.2025** ರಂದು ವಿಧಿಬದ್ಧವಾಗಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಎಸ್ ಆರ್ ಎಸ್ ವಕೀಲರಿಂದ</u>

10. ಆ ದಿವಸ ಪೊಲೀಸರು ನನಗೆ ಫೋನ್ ಮಾಡಿ ಠಾಣೆಗೆ ಕರೆದಿದ್ದಾರೆ, ಆದರೆ ನನಗೆ ಲಿಖಿತ ನೋಟೀಸ್ ಕೊಟ್ಟಿಲ್ಲ. ಪೊಲೀಸರು ನನಗೆ ಮಧ್ಯಾಹ್ನ 12.00 ಗಂಟೆಗೆ ಫೋನ್ ಮಾಡಿರಬೇಕು, ಸಮಯ ನಿಖರವಾಗಿ ನೆನಪಿಲ್ಲ.

11. ನನ್ನ ಸಮಕ್ಷಮದಲ್ಲಿ ಪೊಲೀಸರು ಆರೋಪಿಯನ್ನು ವಿಚಾರಣೆ ಮಾಡಿಲ್ಲ. ಠಾಣೆಗೆ ಹೋದ 15-20 ನಿಮಿಷದ ನಂತರ ನಾವು ಬೆಲವತ್ತಕ್ಕೆ ಹೊರಟಿರುತ್ತೇವೆ. ನಾವು ಬೆಲವತ್ತಕ್ಕೆ ತಲುಪಿದಾಗ ಮಧ್ಯಾಹ್ನ 12.30 ಗಂಟೆ ಆಗಿತ್ತು.

12. ಸುಮಾರು 10-15 ವರ್ಷದಿಂದ ನಾನು ವರುಣಾ ನಾಲೆಯನ್ನು ನೋಡುತ್ತಿದ್ದೇನೆ. ವರುಣಾ ನಾಲೆಯ ಆಜುಬಾಜುವಿನಲ್ಲಿ ಫ್ಯಾಕ್ಟರಿಗಳು ಇವೆ ಎನ್ನುವುದು ಸರಿ. ಫ್ಯಾಕ್ಟರಿಗಳ ತ್ಯಾಜ್ಯವನ್ನುಕೂಡ ಆ ನಾಲೆಗೆ ಬಿಡುತ್ತಾರೆ ಎನ್ನುವುದು ಸರಿ.

13. ನಾನು ಮೀನು ಹಿಡಿಯುವ ವೃತ್ತಿ ಮಾಡುವುದರಿಂದ ಮೀನುಗಳು ಜೀವಿಸುವ ವಿಧಾನಗಳು ನನಗೆ ಗೊತ್ತಿದೆ ಎನ್ನುವುದು ಸರಿ. ಸಾಮಾನ್ಯವಾಗಿ ನಾಲೆಯಲ್ಲಿ ಮೀನುಗಳ ಜೊತೆಯಲ್ಲಿ ಏಡಿಗಳು, ಹಾವುಗಳು, ಸೀಗಡಿಗಳು ಇರುತ್ತವೆ ಎನ್ನುವುದು ಸರಿ.

14. ಮನುಷ್ಯನ ರಕ್ತ ಅಥವಾ ದೇಹ ನದಿಯಲ್ಲಿದ್ದರೆ ಜಲಚರಗಳು ತಿನ್ನುತ್ತವೆ ಎನ್ನುವುದು ಸರಿ. ಬಟ್ಟೆಗಳಲ್ಲಿ ರಕ್ತದ ಕಲೆಗಳು ಇದ್ದರೆ ಅವುಗಳನ್ನು ಕೂಡ ಜಲಚರಗಳು ತಿನ್ನುವ ಸಾಧ್ಯತೆ ಇರುತ್ತದೆ.

ಸಾಮಾನ್ಯವಾಗಿ ಮೀನುಗಳು ಚುಚ್ಚಿ ಚುಚ್ಚಿ ರಕ್ತದ ಕಲೆಗಳನ್ನು ತಿಂದರೆ ಬಟ್ಟೆಗಳಿಗೆ ತೂತುಗಳಾಗುತ್ತವೆ ಎನ್ನುವುದು ಸರಿಯಲ್ಲ. ಆ ವಿಚಾರ ನನಗೆ ಗೊತ್ತಿದ್ದರೂ ಕೂಡ ಬಟ್ಟೆಗಳಿಗೆ ತೂತುಗಳಾವುದಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

15. ಒಂದುವರೆ ಅಡಿ ಆಳದ ನೀರಿರುವ ಕಾಲುವೆಗೆ ವಸ್ತುಗಳನ್ನು ಹುಡುಕಲು ನುರಿತ ಈಜುಗಾರರ ಅವಶ್ಯಕತೆ ಇಲ್ಲ ಎನ್ನುವುದು ಸರಿ. ನೀರಿನ ಮಟ್ಟ 1 ವರೆ ಅಡಿಯಷ್ಟು ಇದ್ದಾಗ ನೀರಿನಲ್ಲಿರುವ ವಸ್ತುಗಳು ಯಾವುದು ಎಂಬುದು ಕಾಣಿಸುತ್ತದೆ ಎನ್ನುವುದು ಸರಿ. ಆ ರೀತಿ ಮೇಲ್ನೋಟಕ್ಕೆ ವಸ್ತುಗಳು ಕಾಣಿಸುವ ಸಾಧ್ಯತೆ ಇರುವ ಕಾರಣಕ್ಕಾಗಿ ಅವುಗಳನ್ನು ಹುಡುಕುವ ಅವಶ್ಯಕತೆ ಇಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ವಸ್ತುಗಳು ಆ ಕಡೆ ಈ ಕಡೆಗೆ ಹೋಗಿರುತ್ತವೆ ಎಂದು ಉತ್ತರಿಸಿದ್ದಾರೆ.

16. ನಿಪಿ.18 ಫೋಟೋದ ಪ್ರಕಾರ ನಾನು ಸೇತುವೆಯಿಂದ 15-20 ಅಡಿ ದೂರದಲ್ಲಿ ನಾಲೆ ಇರುವುದು ಕಂಡುಬರುತ್ತದೆ. ನಾನು ಸೇತುವೆಯಿಂದ 5-6 ಅಡಿ ದೂರದಲ್ಲಿ ಇರುವುದು ಕಂಡುಬರುತ್ತದೆ ಎನ್ನುವುದು ಸರಿಯಲ್ಲ.

17. ನಾನು ಹೋಗಿದ್ದೇನೆ ಎನ್ನಲಾದ ನಾಲೆಯಲ್ಲಿ ಸಾರ್ವಜನಿಕರು ಬಟ್ಟೆ ಒಗೆಯುವ ಸೋಪಾನಕಟ್ಟೆ ಇದೆ ಎನ್ನುವುದು ಸರಿ. ಎಲ್ಲಾ ಪ್ರಕ್ರಿಯೆಗಳು ಮುಗಿದಾಗ ಮಧ್ಯಾಹ್ನ 2.30 ಗಂಟೆ ಆಗಿತ್ತು. ಅಲ್ಲಿ ವಸ್ತುಗಳನ್ನು ನಾನು ತೆಗೆದುಕೊಟ್ಟ ಸಂಬಂಧವಾಗಿ ಪೊಲೀಸರು ಸ್ಥಳದಲ್ಲಿ ನನ್ನ ರುಜುವನ್ನುಪಡೆದುಕೊಂಡಿಲ್ಲ, ಆದರೆ ಠಾಣೆಯಲ್ಲಿ ನನ್ನ ಫೋನ್ ನಂಬರ್ ಮತ್ತು ರುಜುವನ್ನು ಪಡೆದುಕೊಂಡಿದ್ದಾರೆ.

18. ನಾವು ನಾಲೆಯ ಬಳಿ ಸುಮಾರು ಎರಡು ಗಂಟೆಗಳ ಕಾಲ ಇದ್ದೆವು. ನಾಲೆಯ ಬಳಿ ಪೊಲೀಸರು ಬರವಣಿಗೆ ಮಾಡಿದ್ದಾರೋ ಎಂದು

ನಾನು ನೋಡಿಲ್ಲ.

19. ಸುಮಾರು 2-3 ವರುಷದ ಹಿಂದೆ ಕೆ ಆರ್ ಸಾಗರ ಪೊಲೀಸರು ನಮ್ಮನ್ನು ಠಾಣೆಗೆ ಕರೆಯಿಸಿದ್ದರು, ಆ ರೀತಿ ನಾನು ಹೋದಾಗ ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ಇದ್ದರು ಎಂದು ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

20. ಸದರಿ ಲಕ್ಷ್ಮಿಯು ಗಂಗಾರಾಮುವಿನ ಹೆಂಡತಿ ಲಕ್ಷ್ಮಿ ಮತ್ತು 4 ಜನ ಮಕ್ಕಳನ್ನು ಕೊಲೆ ಮಾಡಿದ್ದಾಳೆ ಎಂದು ಆಕೆಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು ಎಂದು ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

21. ಸದರಿ ಲಕ್ಷ್ಮಿಯು ಪೊಲೀಸರ ಮುಂದೆ ಹೇಳಿಕೆಯನ್ನು ಕೊಡುವಾಗ ತಾನು ಲಕ್ಷ್ಮಿ ಮತ್ತು 4 ಜನ ಮಕ್ಕಳನ್ನು ಕೊಲೆ ಮಾಡುವ ಸಂದರ್ಭದಲ್ಲಿ ಧರಿಸಿದ್ದ ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಬೆಳವತ್ತದಲ್ಲಿ ಇರುವ ಕಾಲುವೆಗೆ ಎಸೆದಿದ್ದೇನೆ, ನನ್ನ ಜೊತೆಯಲ್ಲಿ ಬಂದರೆ ಆ ಕಾಲುವೆಯನ್ನು ತೋರಿಸುತ್ತೇನೆ ಎಂದು ತಿಳಿಸಿದ ಮೇರೆಗೆ ಪೊಲೀಸರು, ಆರೋಪಿ ಲಕ್ಷ್ಮಿ ಮತ್ತು ನಾವು ಪೊಲೀಸರ ವಾಹನದಲ್ಲಿ ಬೆಳವತ್ತದ ಕಾಲುವೆಯ ಬಳಿ ಹೋದಾಗ ಆರೋಪಿ ಲಕ್ಷ್ಮಿಯು ಸೇತುವೆ ಮೇಲೆ ನಿಂತುಕೊಂಡು ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಎಸೆದ ಕಾಲುವೆಯ ಜಾಗವನ್ನು ತೋರಿಸಿಕೊಟ್ಟಳು ಎಂದು ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

22. ಆ ರೀತಿ ನಾವು ನೋಡಿದಾಗ ಆ ಕಾಲುವೆಯಲ್ಲಿ ಸುಮಾರು ಒಂದೂವರೆ ಅಡಿಯಷ್ಟು ಆಳದ ನೀರು ಹರಿಯುತ್ತಿತ್ತು, ನಾನು

ಸುಮಾರು ಬಟ್ಟೆಗಳನ್ನು ಎತ್ತಿ ತೋರಿಸಿದೆ, ಅವುಗಳ ಪೈಕಿ ಆರೋಪಿಯು ಒಂದು ಸ್ಯಾರಿ, ಒಂದು ಲಂಗ, ಒಂದು ವೇಲ್ , ಒಂದು ರವಿಕೆಯನ್ನು ತನ್ನದ್ದು ಎಂದು ಗುರುತಿಸಿದಳು, ಆನಂತರ ಅಲ್ಲೇ ಪಕ್ಕದಲ್ಲಿ ಇದ್ದ ಒಂದು ಸುತ್ತಿಗೆಯನ್ನು ನಾನು ತೆಗೆದು ತೋರಿಸಿದಾಗ ಅದನ್ನು ಕೂಡ ಆಕೆ ಗುರುತಿಸಿದಳು ಎಂದು ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

23. ಸದರಿ ನಾಲ್ಕು ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ಆರೋಪಿ ಗುರುತಿಸಿದ ಕಾರಣಕ್ಕಾಗಿ ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

24. ಸದರಿ ಬಟ್ಟೆಗಳನ್ನು ಮತ್ತು ಸುತ್ತಿಗೆಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

25. ಆ ಸಂದರ್ಭದಲ್ಲಿ ಪೊಲೀಸರು ನಿಪಿ 18ರಂತೆ 10 ಪೊಟೋಗಳನ್ನು ತೆಗೆದಿರುತ್ತಾರೆ, ಸದರಿ ಪೊಟೋಗಳ ಪೈಕಿ 3ನೇ ಪೊಟೋದಲ್ಲಿ ನೀರಿನಲ್ಲಿ ವಸ್ತುಗಳನ್ನು ಹುಡುಕುತ್ತಿರುವ ವ್ಯಕ್ತಿ ನಾನು, ಅದೇ ರೀತಿ ನಾಲ್ಕನೇ ಪೊಟೋದಲ್ಲಿ ಒಂದು ಕೈಯಲ್ಲಿ ಬಟ್ಟೆ ಮತ್ತು ಸುತ್ತಿಗೆಯನ್ನು ಹಿಡಿದಿರುವ ಮತ್ತು ಉಳಿದ ಪೊಟೋಗಳನ್ನು ಬಟ್ಟೆಗಳನ್ನು ತೆಗೆದು ತೋರಿಸುತ್ತಿರುವ ವ್ಯಕ್ತಿ ನಾನು ಎಂದು ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

26. ಸದರಿ ಸುತ್ತಿಗೆ ನ್ಯಾಯಾಲಯದ ಮುಂದಿರುವ ಮು.ಮಾ 19 ಆಗಿದೆ, ಬಟ್ಟೆಗಳು ಮು.ಮಾ 20 ರಿಂದ 23 ಆಗಿವೆ ಎಂದು ನಾನು

ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

27. ನಾನು ತೆಗೆದುಕೊಟ್ಟ ಬಟ್ಟೆಗಳು ಮತ್ತು ಸುತ್ತಿಗೆಯ ಮೇಲೆ ನಾನು ವಿಶೇಷವಾದ ಗುರ್ತನ್ನು ಇಟ್ಟುಕೊಂಡಿಲ್ಲ. ಮು ಮಾ 19 ರಿಂದ 23 ನ್ನು ಪೊಲೀಸರು ಸೃಷ್ಟಿಸಿಕೊಟ್ಟಿದ್ದಾರೆ ಮತ್ತು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)